‘ಏನಾದರೂ ಅಂದುಕೋ... ನೀನೊಬ್ಬ ಸಾರ್ವಜನಿಕ ವ್ಯಕ್ತಿ ಅಂತ ಬರಕೊಂಡಿದ್ದೀಯಲ್ಲ, ಅಂದಮೇಲೆ ನೀನೊಂದು ತೆರೆದ ಪತ್ರ ತಾನೇ? ಯಾರು ನೋಡಿದರೇನು, ಅಲ್ಲವಾ?’

‘ಯು ಆರ್ ರೈಟ್... ಆದರೂ ಯಾಕಿಂಥ ಆಸಕ್ತಿ ಅನ್ನೋ ಕುತೂಹಲ ಅಷ್ಟೆ...’

‘ವೆಲ್... ಅದೇನೂ ಮುಖ್ಯ ಅಲ್ಲ ಬಿಡು... ನಿನ್ನ ಊರಿನಲ್ಲಿ ಬೀದಿ ಸುತ್ತದ ನೀನು ಈ ಬೆಂಗಳೂರಿನಲ್ಲಿ ಅನಾಮಿಕವಾಗಿ ಅಡ್ಡಾಡೋದು ನೋಡಿ ಆಶ್ಚರ್ಯ ಆಯಿತು ಅಷ್ಟೆ. ಯಾಕೆ ಹೀಗೆ ಅನ್ನೋ ಕುತೂಹಲ ಯಾವೊತ್ತೂ ನನಗಿತ್ತು...’

‘ಕೇರಳದಲ್ಲಿ ಹೀಗೆಲ್ಲ ಇರೋಕೆ ಸಾಧ್ಯ ಅಂದುಕೊಂಡಿದ್ದೀಯಾ? ಎಷ್ಟೆಲ್ಲ ಮಂದಿಯ ಕಣ್ಣಹರೆ ಮೀರಬೇಕು ಗೊತ್ತಾ? ಬೀದಿಗಿಳಿದರೆ ಸಾಕು, ಸುದ್ದಿಯಾಗಿಬಿಡುತೀನಿ ಅಷ್ಟೆ... ಐ ಕಾನ್ಟ್ ಡು ಈವನ್ ಎ ಡೇಟ್ ಎಟ್ ಮೈ ವಿಲ್ ಗೊತ್ತಾ? ಇಟ್ಸ್ ಇಂಪಾಸಿಬಲ್!’

‘ಸೋ, ಡೇಟುಬೇಟಕ್ಕೆಂದು ಇಲ್ಲಿಗೆ ಬರುತೀಯಾ?’

‘ವೆಲ್... ಸುಳ್ಳು ಯಾಕೆ ಹೇಳಲಿ... ಆ ವಿಷಯ ಆಮೇಲೆ. ಕೇರಳದಲ್ಲಿ ಹೀಗಿರಲಿಕ್ಕೆ ಸಾಧ್ಯ ಆಗಲ್ಲ ಅಷ್ಟೆ. ಒಂದೊಂದು ಸಲ ಸಾಕನಿಸಿಬಿಡುತ್ತೆ... ಹಾಡು ಪಸ್ಟ್ರ್ಯ ಮಾಡಲೋ, ಇಲ್ಲಾ ಕವಿತೆಯನ್ನೋ?! ಈ ಯೋಚನೆಯೇ ನನ್ನನ್ನು ತಬ್ಬಿಬ್ಬು ಮಾಡಿಸುತ್ತೆ...’

‘.....’

‘ಇವೆರಡನ್ನ ಹಿಡಕೊಂಡಿದ್ದರೆ ನನ್ನನ್ನ ನಾನು ಹಿಡಕೊಳ್ಳೋದು ಹೇಗೆ? ಮೈ ಇನ್ನೊಂದು ಸಂಗ ಬೇಕೂಂತ ಹಾತೊರೆಯುತ್ತೆ, ಮನಸ್ಸು ಒಂಟಿಯಿರಬೇಕೂನಿಸುತ್ತೆ... ಛೇ...’

‘ನನಗೆ ಅರ್ಥ ಆಗುತ್ತೆ. ನಾನು ನಿನ್ನನ್ನ ಅರ್ಥ ಮಾಡಿಕೊಳ್ಳಬಲ್ಲೆ. ಯಾಕೆಂದರೆ ನೀನು ಬರೆಯೋದನ್ನ ನಾನು ಓದಿದೀನಿ. ಸೋ ನೀನೇನೂಂತ ನನಗೆ ಚೆನ್ನಾಗಿ ಗೊತ್ತು...’

‘ಹೀಗೆಲ್ಲ ಹೇಳಿದರೆ ಅಂಜುವಂತಾಗುತ್ತೇ, ಹೆಣ್ಣೆ... ಯಾರಿಗೂ ತಿಳಿಯಬಾರದೂಂತ ಏನೇನೆಲ್ಲ ಮಾಡಿದವನು ಗೊತ್ತಾ, ನಾನು! ನಾನೇನೂಂತ ಗೊತ್ತು ಅಂತೀಯಲ್ಲ...’

‘....’

‘ದೇವರೇ... ಹಾಗೇ ನಸುನಕ್ಕು ಸುಮ್ಮನಾದೆಯಲ್ಲ... ಹೇಳು, ನನ್ನ ಬಗ್ಗೆ ಏನು ಗೊತ್ತು ನಿನಗೆ?’

‘ಲೀವಿಟ್... ವಿಷಯ ಬದಲಿಸೋಣ...’

‘ಸುಮ್ಮನೆ ಹೇಳಿಬಿಡು, ಹೆಣ್ಣೇ...’

‘ಬೇಡ ಅಂದೆನಲ್ಲ...’

‘ಪ್ಲೀಸ್...’

‘ನಿಜವನ್ನೇ ಹೇಳಿಬಿಡಲಾ?’

‘ಸತಾಯಿಸಬೇಡವೇ, ಪ್ಲೀಸ್...’

‘ಸರಿ... ಇನ್ನೊಂದು ಕಾಫಿ ಆರ್ಡರ್ ಮಾಡೋಣ. ಹಾಗೇ ನನಗೊಂದು ವಾಲ್ನಟ್ ಬ್ರೌನೀ... ಕಾಫಿ ಕುಡಿದು ಮಾತಾಡೋಣ...’

‘ಕಾಫೀ ಬರೋವರೆಗೂ ಸುಮ್ಮನೆ ಕೂತಿರೋದಾ?’

‘ಇಲ್ಲ... ಕತ್ತಲಾಗಿದೆಯಲ್ಲ, ಆಕಾಶದಲ್ಲಿ ನಕ್ಷತ್ರ ಬಿಡಿಸಿಕೊಂಡಿರೋಣ...’

★★★

‘ಈಗ ಹೇಳು... ನಾನೊಮ್ಮೆ ತುಟಿಗಿಟ್ಟ ಕಪ್ಪನ್ನು ಮುಗಿಸೋವರೆಗೂ ಕೆಳಗಿಳಿಸೋಳಲ್ಲ...